**ಕರ್ನಾಟಕ ಸರ್ಕಾರ**

ಸಂಖ್ಯೆ : ಇಡಿ 23 ಎಸ್ಇಪಿ 2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 08-02-2016

**ಇವರಿಂದ :-**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು – 560 001.

**ಇವರಿಗೆ :-**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

ಮಾನ್ಯರೇ,

**ವಿಷಯ : ದಿನಾಂಕ : 02-02-2000ರ ಪೂರ್ವದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ (2 ಮತ್ತು 3ನೇ ಗ್ರೂಪ್-ಡಿ) ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು.**

**ಉಲ್ಲೇಖ : 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ : ಪಿ8(6)ಶಾ.ಶಿ.ಅ.ಗ್ರೂಪ್-ಡಿ/ವೇತನಾನುದಾನ/95/2014-15, ದಿನಾಂಕ : 02-05-2015.**
**2. ಇದೇ ಸಮ ಸಂಖ್ಯೆಯ ದಿನಾಂಕ : 03-11-2014.**

\- - - - - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ದಿನಾಂಕ : 02-02-2000ರಂದು ಪ್ರೌಢಶಾಲೆಗೆ ಸಂಬಂಧಿಸಿದಂತೆ ತರಲಾಗಿರುವ ಸಿಬ್ಬಂದಿ ಮಾದರಿ ರಚನೆಯನ್ವಯ ಒಂದು ಶಾಲೆಗೆ ಒಂದು ಗ್ರೂಪ್-ಡಿ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಅವಕಾಶವಿದೆ. ಸಿಬ್ಬಂದಿ ಮಾದರಿಯನ್ನು ಮೀರಿ ಹೆಚ್ಚುವರಿಯಾಗಿ ನೇಮಕಾತಿ ಮಾಡಿಕೊಂಡಿರುವ ಸಿಬ್ಬಂದಿಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ. ಶಾಸನಾತ್ಮಕ ನಿಯಮಗಳನ್ನು ಮೀರಿ ಹಾಗೂ ಸರ್ಕಾರದ ಪ್ರಕಟಿತ ನೀತಿಯನ್ನು ಉಲ್ಲಂಘಿಸಿ ಹೆಚ್ಚುವರಿ ಸಿಬ್ಬಂದಿಗಳನ್ನು ಅನುದಾನಕ್ಕೆ ಒಳಪಡಿಸುವುದು ಸೂಕ್ತವಲ್ಲ. ಇಂತಹ ಹಲವಾರು ಬೇಡಿಕೆಗಳಿಗೆ ಕಾರಣವಾಗುವುದಲ್ಲದೇ ಅನಾವಶ್ಯಕ ಕಾನೂನು ಮತ್ತು ಆಡಳಿತ ಸಮಸ್ಯೆಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ ತಮ್ಮ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ಈ ಸಂಬಂಧ ಉಲ್ಲೇಖ-2ರ ಪತ್ರದಲ್ಲಿ ತಿಳಿಸಿರುವ ನಿರ್ದೇಶನದಂತೆ ಕ್ರಮವಹಿಸುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಸುಮಿತ್ರ ಎಂ 8/02/2016

(ಸುಮಿತ್ರ ಎಂ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಡಿ4(6) ಶಾ.ಶಿ.ಉ. ಸ್ಪ್ರೇಟ್.ಪಿ.ಪಿ.6.95/14-15
9/03-16.

ಸರ್ಕಾರದ ಪತ್ರದ ಸಂಖ್ಯೆ ಇಡಿ.23-ಎಸ್.ಇ.ಬಿ.2014.
ಬೆಂಗಳೂರು. ದಿನಾಂಕ- 8-02-2016 ರಲ್ಲಿ ಸೂಚಿಸಿರು
ವಂತೆ, ಸೂಕ್ತ ಕ್ರಮ ಕೈಗೊಳ್ಳಲು, ಸೂಚಿಸಿದೆ,
(ಸರ್ಕಾರದ ಪ್ರತಿಯೊಂದಿಗೆ)

9/3/16

DEPUTY DIRECTOR (SECONDARY)
OFFICE OF THE COMMISSIONER
FOR PUBLIC INSTRUCTION
BANGALORE - 01

ಗೆ,

ಬೆಂಗಳೂರು ವಿಭಾಗದ ಮತ್ತು
ಮೈಸೂರು ವಿಭಾಗದಲ್ಲಿನ ಎಲ್ಲಾ
ಉಪನಿರ್ದೇಶಕರು (ಆಡಳಿತ) ರವರಿಗೆ
ಮುಂದಿನ ಸೂಕ್ತ ಕ್ರಮಕ್ಕಾಗಿ,